ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ ಃ 378/2020**

ಸಾಕ್ಷಿದಾರರ ಹೆಸರು ಃ ಗುಣವಂತ

ತಂದೆಯ ಹೆಸರು ಃ ಜಯರಾಂ

ವಯಸ್ಸು ಃ **23** ವರ್ಷ

ಉದ್ಯೋಗ ಃ ಕಟಿಂಗ್ ಶಾಪ್ ಕೆಲಸ

ವಾಸಸ್ಥಳ ಃ ಹಳೇಪೇಟೆ, ನ ರಾ ಪುರ

ಸಿ.ಡಬ್ಲ್ಯೂ- **9**

ಪಿ.ಡಬ್ಲ್ಯೂ- **5**

ದಿನಾಂಕಃ **03.10.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ಆರೋಪಿತರು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರ ವಿರುದ್ಧ ಈ ಪ್ರಕರಣ ಏಕೆ ದಾಖಲೆ ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಮಹಜರ್ ಮಾಡಿ ಮಹಜರ್ ಮೂಲಕ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ.

ಈಗ್ಗೆ ಸುಮಾರು 4 ವರುಷಗಳ ಹಿಂದೆ ಪೊಲೀಸರು ಎರಡು ದಾಖಲೆ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಅದರಲ್ಲಿರುವ ವಿಚಾರಗಳು ಗೊತ್ತಿಲ್ಲ.

ಸಾಕ್ಷಿಯು ಒಂದು ದಾಖಲೆ ಮೇಲೆ ತನ್ನ ಸಹಿ ನೋಡಿ ಗುರುತಿಸಿದ್ದು ಅದು ಸ್ಥಳ ಮಹಜರ್ ಆಗಿದ್ದು ಅದು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

ಸಾಕ್ಷಿಯು ಮತ್ತೊಂದು ದಾಖಲೆ ಮೇಲೆ ತನ್ನ ಸಹಿ ನೋಡಿ ಗುರುತಿಸಿದ್ದು ಅದು ಮಹಜರ್ ಆಗಿದ್ದು ಅದು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ

ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಮತ್ತು 6 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ

ದಿಃ 25.04.20 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ರಾವೂರು ನಲ್ಲಿರುವ ಪಿಲೇಟಾ ನಡುತೋಪಿನಲ್ಲಿ ಚಾಸಾ-1 ರಿಂದ 3 ರವರು ಗಸ್ತು ಮಾಡುವಾಗ ಆರೋಪಿ 1 ಮತ್ತು 5 ರವರುಗಳು ಟ್ರ್ಯಾಕ್ಟರ್ ಕೆಎ-18-ಟಿಬಿ-2340 ತೆಗೆದುಕೊಂಡು ಬಂದು ಮರಗಳನ್ನು ಕಡಿಯುವಾಗ ಚಾಸಾ-1 ರಿಂದ 3 ಏಕೆ ಕಡಿಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಆರೋಪಿತರು ಚಾಸಾ-1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ಈ ಸಂಬಂಧ ದಿನಾಂಕಃ 26.04.2020 ರಂದು ಮಧ್ಯಾಹ್ನ 2 ಗಂಟೆಯಿಂದ 2.30 ರವರೆಗೆ ನನ್ನ ಮತ್ತು ಚಾಸಾ-8 ರವರ ಸಮಕ್ಷಮ ಮಹಜರ್ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆಂದರೆ ಸರಿಯಲ್ಲ.

ನಂತರ ಅದೇ ದಿನ ರಾತ್ರಿ 11 ಗಂಟೆ ಸಮಯದಲ್ಲಿ ಪುನಃ ಆರೋಪಿತರು ಚಾಸಾ-1 ರವರ ಮನೆಯ ಒಳಗಡೆ ಅತಿಕ್ರಮ ಪ್ರವೇಶ ಮಾಡಿ ಮರ ಕಡಿಯಲು ತೊಂದರೆ ಮಾಡಿದ್ದರಿಂದ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅವರಿಗೆ ಹೊಡೆಬಡೆ ಮಾಡಿ ಕೊಲೆ ಬೆದರಿಕೆ ಹಾಕಿರುವ ಸಂಬಂಧ ದಿನಾಂಕಃ 26.04.2020 ರಂದು ಮಧ್ಯಾಹ್ನ 2.45 ರಿಂದ 3.15 ರವರೆಗೆ ನನ್ನ ಮತ್ತು ಚಾಸಾ-8 ರವರ ಸಮಕ್ಷಮ ಮಹಜರ್ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಎಸ್ ಎಸ್ ವಕೀಲರ ಪರವಾಗಿ ಶ್ರೀ ಹೆಚ್ ಎಂ ಬಿ ವಕೀಲರಿಂದಃ ಏನೂ ಇಲ್ಲಃ

ಃಮರುವಿಚಾರಣೆ ಇಲ್ಲಃ

**(ದಿನಾಂಕಃ03.10.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ